# ಮುಂದಿನದು ಮಕ್ಕಳ ಋಣದ ಕಾಲ



■ ಸ್ವಯಂಪ್ರಭಾ

ನೀಲಿಮಾ ಚಪಾತಿ ಲಟ್ಟಿಸುತ್ತಿದ್ದಳು. ಮಗಳು ಚಪಾತಿ ಸುಡುತ್ತಾ ಅದೂ ಇದೂ ಮಾತನಾಡುತ್ತಿದ್ದಳು. ಪಿಯುಸಿ ಓದುತ್ತಿರುವ ಮಗಳು ಲಾಕ್‌ಡೌನ್ ಸಂದರ್ಭದಲ್ಲಿ ಅಡುಗೆ ಮನೆ ಕಡೆಗೆ ಹೆಚ್ಚು ಬರತೊಡಗಿದ್ದಳು. ಕಾರಣವಿಷ್ಟೆ. ಸ್ನೇಹಿತರೆಲ್ಲ ಅಡುಗೆ ಮನೆ ಸ್ಟೇಟಸ್ ಹಾಕುವಾಗ ತಾನೂ ಹೊಸ ಹೊಸ ಅಡುಗೆ ಮಾಡಲು ಶುರು ಮಾಡಿದ್ದಳು. ಅದಕ್ಕೆ ಯೂಟ್ಯೂಬ್ ನೆರವು ಬೇರೆ ಇದೆಯಲ್ಲ. ಈ ಅಡುಗೆ ಹುಮ್ಮಸ್ಸು ನೋಡಿದರೆ, ಈ ಕಾಲದ ಮಕ್ಕಳು ಮನೆಕೆಲಸವೆಂದರೆ ಉದಾಸೀನ ಮಾಡುತ್ತಾರೆ ಎಂಬ ಆರೋಪವೇ ಸುಳ್ಳು ಅನಿಸುತ್ತದೆ. ಮಕ್ಕಳು ಮೊಬೈಲ್ ವಿಚಾರದಲ್ಲಿ ಭಾರಿ ಚುರುಕುಮತಿಗಳು ಎಂದು ಪೋಷಕರೂ ಹೊಗಳುತ್ತಾರೆ. ಆದರೆ ಅವರು ಇನ್ನೂ ಅನೇಕ ವಿಚಾರಗಳಲ್ಲಿ ಚುರುಕುಮತಿಗಳೇ ಆಗಿರುತ್ತಾರೆ. ಪೋಷಕರ ಚೌಕಟ್ಟಿಗೆ ಅವರ ಚುರುಕುಮತಿ ಒಗ್ಗುವುದಿಲ್ಲ ಅಷ್ಟೆ.

ಚಪಾತಿ ಸುಡುತ್ತ, ಮಗಳು ಹೇಳಿದಳು: ‘ಅಮ್ಮ ಪ್ರೆಗ್ನೆನ್ಸಿ ಎಂದರೆ ಎಷ್ಟು ಚಂದದ ವಿಚಾರ ಗೊತ್ತಾ ನಿನಗೆ...’ ಅವಳು ಯಾವ ಅರ್ಥದಲ್ಲಿ ಹೇಳುತ್ತಿದ್ದಾಳೆ ಎಂದು ಅರ್ಥವಾಗದೇ ನೀಲಿಮಾ ಚಪಾತಿ ಲಟ್ಟಿಸುವುದನ್ನು ನಿಲ್ಲಿಸಿದಳು. ಮಗಳು ಮುಂದುವರೆಸಿದಳು, ‘ಪ್ರೆಗ್ನೆನ್ಸಿ ಬಗ್ಗೆ ಆರೋಗ್ಯ ಕಾಳಜಿಯ ಬಗ್ಗೆಯಷ್ಟೇ ಹೆಚ್ಚು ಲೇಖನಗಳು ಓದಲಿಕ್ಕೆ ಸಿಗುತ್ತವೆ. ಗರ್ಭದೊಳಗಿನ ಮಗುವನ್ನು ಕಾಳಜಿ ಮಾಡುವ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಆದರೆ ಹೊಟ್ಟೆಯೊಳಗಿರುವ ಮಗು ಕೂಡ ಅಮ್ಮನ ಕಾಳಜಿ ಮಾಡುತ್ತದೆ ಗೊತ್ತಾ? ಉದಾಹರಣೆಗೆ ದೇಹದ ಒಳಗೆ ಅಂಗಾಂಗಗಳಿಗೆ ತೊಂದರೆಯಾದರೆ, ಮಗು ಆ ಬಗ್ಗೆ ಕಾಳಜಿ ಮಾಡುತ್ತದೆ. ಅಲ್ಲಿ ಆಗಿರುವ ಹಾನಿ ಸರಿಪಡಿಸಲು ಬೇಕಾದ ಕೋಶಗಳ ಬೆಳವಣಿಗೆಯಾಗಲು ಪ್ರೇರಣೆ ಕೊಡುತ್ತದೆ...’ ಎನ್ನುತ್ತ ವಿವರಿಸತೊಡಗಿದಳು.

ತನ್ನ ಗ್ರಹಿಕೆಗೆ ಈವರೆಗೆ ಹೊಳೆಯದ ವಿಷಯ ಮಾತನಾಡುತ್ತಿದ್ದ ಮಗಳು ನೀಲಿಮಾಳಿಗೆ ಈಗ ಇನ್ನಷ್ಟು ಚಂದ ಕಾಣಿಸತೊಡಗಿದಳು.

ಸಾಮಾನ್ಯವಾಗಿ ಅಪ್ಪ–ಅಮ್ಮನ ಋಣದ ಬಗ್ಗೆ ಹೆಚ್ಚು ಚರ್ಚೆಗಳಾಗುವುದುಂಟು. ಎಷ್ಟೇ ಬಡತನವಿರಲಿ, ಅಮ್ಮ–ಅಪ್ಪ ತಮ್ಮ ಮಕ್ಕಳಿಗೆ ಆದ್ಯತೆ ನೀಡಿ ಅವರ ಬೇಕುಗಳನ್ನು ಪೂರೈಸುತ್ತಾರೆ. ತಾಯಿಯಂತೂ ತನ್ನ ರಕ್ತಮಾಂಸವನ್ನೇ ಬಸಿದು ಮಕ್ಕಳಿಗೆ ಜನ್ಮ ನೀಡಿರುತ್ತಾಳೆ. ಜನ್ಮ ನೀಡುವ ಪ್ರಕ್ರಿಯೆಯಲ್ಲಿ ಪ್ರಾಣವನ್ನೇ ಪಣಕ್ಕಿಡುವ ಸಂದರ್ಭ ಎದುರಿಸುತ್ತಾಳೆ ಎಂಬೆಲ್ಲ ಮಾತುಗಳನ್ನು ಕೇಳುತ್ತೇವೆ. ಅವೆಲ್ಲ ನಿಜವೂ ಹೌದು. ಆದರೆ ಋಣದ ವಿಚಾರಕ್ಕೆ ಬಂದರೆ, ಯಾರ ಋಣ ಹೆಚ್ಚು ಎನ್ನುವುದನ್ನು ತೂಗಿ ನೋಡುವುದು ಸಾಧ್ಯವಿಲ್ಲ. ಮಕ್ಕಳು ಕೂಡ ಅಪ್ಪ ಅಮ್ಮನಿಗೆ ಎಷ್ಟೊಂದು ಸಂತೋಷ ಕೊಟ್ಟಿರುತ್ತಾರೆ. ಮಗುವೊಂದು ಮನೆಗೆ ಬರುತ್ತದೆ ಎಂಬ ನಿರೀಕ್ಷೆಯೊಂದಿಗೆ ಶುರುವಾಗುತ್ತದೆ ಸಂತೋಷದ ಒರತೆ. ಮಗು ಹುಟ್ಟಿ ನಡಿಗೆ, ಮಾತು, ಹಾಡು ಎಂಬೆಲ್ಲ ಹಂತಗಳನ್ನು ಅದು ದಾಟುವಾಗ, ಮನೆಯ ತುಂಬ ಖುಷಿಯ ಬುಗ್ಗೆಯೇ ತೇಲುತ್ತಿರುತ್ತದೆ. ಪುಟ್ಟ ಮಗುವೊಂದು ಮನೆಯಲ್ಲಿದ್ದರೆ, ತಂದೆ ತಾಯಿ ತಮ್ಮ ಇತರ ಕಷ್ಟಗಳನ್ನು ಹೇಗೋ ನಿಭಾಯಿಸಿಬಿಡುತ್ತಾರೆ. ಪತಿ–ಪತ್ನಿಯರ ನಡುವಿನ ಬಂಧನವೂ ಇನ್ನಷ್ಟು ಬಿಗಿಯಾಗುತ್ತದೆ,

ಚಿತ್ರನಟ ಉಪೇಂದ್ರ ಸಂದರ್ಶನವೊಂದರಲ್ಲಿ ಈ ಮಾತು ಪ್ರಸ್ತಾಪಿಸಿದ್ದರು: ‘ಮಕ್ಕಳು ತಮ್ಮ ಬಾಲ್ಯದಲ್ಲಿ ಅಪ್ಪ ಅಮ್ಮನಿಗೆ ಎಷ್ಟೊಂದು ಸಂತೋಷ ಕೊಟ್ಟಿರುತ್ತಾರೆ ಎಂದರೆ ನಿಜವಾಗಿಯೂ ಅಪ್ಪ ಅಮ್ಮನೇ ಮಕ್ಕಳಿಗೆ ಋಣಿಯಾಗಿರಬೇಕು.’ ನಿಜ. ಸಂತೋಷದ ಅವಧಿ ಸದಾ ಚಿಕ್ಕದಾಗಿಯೇ ಕಾಣುತ್ತದೆ. ಅದರಲ್ಲಿಯೂ ಬಾಲ್ಯವಂತೂ ಎಷ್ಟೊಂದು ವೇಗವಾಗಿ ಸಾಗುತ್ತದೆ. ಬಾಲ್ಯ ಕಳೆಯುತ್ತಲೇ ಬದುಕಿನ ಸವಾಲುಗಳೆಲ್ಲ ಸಂಕೀರ್ಣವಾಗಿ ಕಾಣಿಸತೊಡಗುತ್ತವೆ. ಆದ್ದರಿಂದ ಮಕ್ಕಳು ಕೊಟ್ಟ ಖುಷಿ ಕ್ಷಣಗಳನ್ನೂ ಅಪ್ಪಅಮ್ಮ ಬೇಗನೇ ಮರೆತುಬಿಡುತ್ತಾರೇನೊ?

ಒಂದಂತೂ ನಿಜ, ಋಣದ ಪರಿಕಲ್ಪನೆ ನಿಜವಾಗಿಯೂ ಬದಲಾಗಬೇಕಾಗಿದೆ.

ಭಾರತದಲ್ಲಿ ದುಡಿಯುವ ಯುವಜನತೆಯ ಪ್ರಮಾಣ ಹೆಚ್ಚಿರುವ ಬಗ್ಗೆ, ಮಾನವ ಸಂಪನ್ಮೂಲ ಯಥೇಚ್ಛವಾಗಿ ಇರುವ ಬಗ್ಗೆ ಪದೇ ಪದೇ ಮಾಧ್ಯಮಗಳು ಹೇಳುತ್ತಿವೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಕುಟುಂಬಗಳಲ್ಲಿ ಒಂದೇ ಮಗು ಸಾಮಾನ್ಯ. ದುಡಿಯುವ ಅಪ್ಪ ಅಮ್ಮಂದಿರ ಕುಟುಂಬ ತೀರಾ ಮೈಕ್ರೋ. ಹಾಗಿದ್ದರೆ ಮುಂದಿನ ವರ್ಷಗಳಲ್ಲಿ ಇದೇ ಯುವಜನತೆ ನಿವೃತ್ತರಾಗಿ, ವೃದ್ಧಾಪ್ಯವನ್ನು ಪ್ರವೇಶಿಸುತ್ತಿದ್ದಂತೆಯೇ, ಅವರ ಮಕ್ಕಳು ದುಡಿಯುವ ಹಂತಕ್ಕೆ ಬಂದಿರುತ್ತಾರೆ ಅಲ್ಲವೇ? ಆಗ, ಅವರ ಹೆಗಲ ಮೇಲೆ ಇರುವ ಜವಾಬ್ದಾರಿಗಳು ಎಷ್ಟೊಂದು ಭಿನ್ನವಾಗಿರುತ್ತವೆ. ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನ ಪ್ರೇರಿತ ಜಗತ್ತಿನಲ್ಲಿ ಅವರು ಎದುರಿಸುವ ಸವಾಲುಗಳು ಯಾವುವು ಎಂದು ಅಂದಾಜಿಸುವುದು ಬಹುಕಷ್ಟ.

ಒಂದು ಕುಟುಂಬದ ಒಬ್ಬಳೇ ಹುಡುಗಿಯನ್ನು ಮತ್ತೊಂದು ಕುಟುಂಬದ ಒಬ್ಬನೇ ಹುಡುಗನಿಗೆ ಮದುವೆ ಮಾಡಿಕೊಡುವುದು ಅನಿವಾರ್ಯವಾಗುತ್ತದೆ. ಹಾಗಾದಾಗ ಆ ದಂಪತಿಯ ಹೆಗಲ ಮೇಲೆ ನಾಲ್ವರು ಹಿರಿಯ ನಾಗರಿಕರನ್ನು ಪೋಷಿಸುವ ಜವಾಬ್ದಾರಿ ಇರುತ್ತದೆ ಎನ್ನುವ ದೂರಾಲೋಚನೆಯನ್ನೂ ಮಾಡಬೇಕಾಗಿದೆ. ಮಾತೃಋಣ, ಪಿತೃಋಣ ಎಂಬೆಲ್ಲ ಹೊರೆಗಳನ್ನು ಪಕ್ಕಕ್ಕೆ ಇರಿಸಿ ಮಕ್ಕಳು ಸ್ವತಂತ್ರರಾಗಿ ಬಾಳುವಂತೆ ಸಿದ್ಧಪಡಿಸುವುದಷ್ಟೇ ಸದ್ಯಕ್ಕೆ ಅಪ್ಪ ಅಮ್ಮಂದಿರ ಮುಂದಿರುವ ಜವಾಬ್ದಾರಿ. ತಮ್ಮ ವೃದ್ಧಾಪ್ಯದ ಹೊರೆಯನ್ನು ತಾವೇ ಹೊತ್ತುಕೊಳ್ಳುವುದು ಮುಂದಿನ ದಿನಗಳಲ್ಲಿ ಅನಿವಾರ್ಯ. ಜೊತೆಗೆ ವಿವಾಹ ಎಂಬ ಸಂಸ್ಥೆಯ ಸ್ವರೂಪವೂ ಬದಲಾವಣೆಯ ಸುಳಿಗಾಳಿಗೆ ಸಿಲುಕುತ್ತಿದೆ ಎನ್ನುವುದನ್ನೂ ಹಿರಿಯರು ಜೀರ್ಣಿಸಿಕೊಳ್ಳಬೇಕಾಗಿದೆ. ■